


**ಎಡದಿಂದ ಬಲಕ್ಕೆ:**

1. ಆತನ ಜಂಬಗಾರತನ ಹುಟ್ಟಿನಿಂದಲೇ ಬಂದದ್ದು (4)
3. ಕಮ್ಮಿ ಏನೂ ಇಲ್ಲ, ಅದು ಸುಂದರ ಬಾಗು (3)
4. ರಸಬಾಳೆಯನ್ನೇ ಬಯಸೀತು ನಾಲಿಗೆ (3)
6. ಜಾಡಿಗಳನ್ನೆಲ್ಲ ಕರಗಿಸಿತು ಎಡೆಬಿಡದ ವರ್ಷಧಾರೆ (4)
7. ಆ ಕಾಜಾಣ ಮರಿಯ ತಂದೆ ಇದು (3)
9. ಹೂ ಕೀಳುವವಗೆ ತಕ್ಕ ಪಾದರಕ್ಷೆ ನೋಡಿ (3)
11. ಜಮುನಕ್ಕ ಬಯಸಿದ್ದು ಇದೇ ಕರ್ಣಾಭರಣ (3)
13. ಸರಕನ್ನೆಲ್ಲ ಹೂತು ಹಾಕಿತು ಮಣ್ಣು–ನೀರು ಮಿಶ್ರಣ (3)
15. ಹೆಬ್ಬುಲಿಗೆ ಸಮನಾದದ್ದು ಅವನ 'ತೋಳಿನ ಶಕ್ತಿ' (4)
17. ಮೆಲ್ಲುತ್ತ ಉಲಿದದ್ದು 'ಮೆತ್ತಗಿನ ದನಿ' (3)
18. ಕ್ಷೇತ್ರದ ಜನರೆಲ್ಲ ನೋಡಿದರು–ಭೂಮ್ಯಾಕಾಶ ಸಂಧಿಸುವ ಸ್ಥಳ (3)
19. ಕಣ್ಣರಳಿಸಿ ಕೋಪ ಬರಿಸು (4)

**ಮೇಲಿಂದ ಕೆಳಕ್ಕೆ:**

1. ಅವನ ಜೊತೆಗಿರುವವ ಸಹೋದರ (3)
2. ತೇರೆಳೆಯಲು ಬಂದಳೇ ಈ ಬಾಲೆ? (3)
3. ಕಂದಕ ದಾಟಿದವನೊಡನೆ ಯುದ್ಧವೇ? (3)
5. ನಾರ್ವೆ ದೇಶದಿಂದ ಒದಗಿದ ಸಹಾಯ ಇದೇ (3)
7. ಶಹಜಹಾನ ಪಯಣಿಸಿದ್ದು ಇಂಥದೇ ಹಡಗಿನಲ್ಲಿ ಹೌದೇ? (3)
8. 'ಕಾಕಿ'ಯ ಹಿಂದೆಯೂ ಸೇರಿ ಕಾಗುಣಿತ (3)
9. ಹಾರಲಿಕ್ಕೆ ಸಾಧ್ಯವಾಗಲೆಂಬ ಆಶಯ (3)
10. ಗಾಬರಿ ಮಾಡಿದವರನ್ನು ಪರಚು, ಗೀರು (3)
12. ಹಿಮದ ಮೇಲೆ ನಡೆದಾಡಿದ್ದರ ಶ್ರೇಷ್ಠತೆ ಏನು? (3)
14. ನಿತ್ಯ ಸರಬರಾಜಾಗುತ್ತಿರುವುದು ಇದೇ ತಾವರೆ (3)
15. ಬಲೆ ಎಳೆಯಲಿಕ್ಕೆ ಬಂದಾಕೆ ಎಳೇ ಹುಡುಗಿ (3)
16. ಶಿಕ್ಷಿಸಲು ಬಂದವರನ್ನು ಗಮನಿಸು (3)

## ಪದಬಂಧ: 21-1-2010ರ ಉತ್ತರಗಳು

**ಎಡದಿಂದ ಬಲಕ್ಕೆ:**

1-ಅಂಧಕಾರ; 3-ಅಳುಕು; 4-ಸೀಮಿತ; 6-ಶತಪದಿ; 7-ಮುಗುದ; 9-ಅರಿಕೆ; 11-ಕೆಲಸ; 13-ದಮನ; 15-ತಾರಾಬಲ; 17-ತತ್ತರ; 18-ಗಹನ; 19-ಕಸರತ್ತು.

**ಮೇಲಿಂದ ಕೆಳಕ್ಕೆ:**

1-ಅಂಕುಶ; 2-ರಸೀದಿ; 3-ಅಡಗು; 5-ತಯಾರಿ; 7-ಮುಚ್ಚಳಿಕೆ; 8-ಧನದಾಸ; 9-ಅನುವಾದ; 10-ಕೆಟ್ಟಜನ; 12-ಲಲಿತ; 14-ಮಲಿನ; 15-ತಾರಕ; 16-ಲಗತ್ತು.

# ಕಳ್ಳಿಗಿಡಕ್ಕೆ ಎಲೆಗಳೇಕಿಲ್ಲ..?

ಅದೇಕೇ ಇರಲಿ, ಕಳ್ಳಿಗಿಡಗಳ ಕಾಂಡ ಕೊಂಬೆಗಳೆಲ್ಲ ಹಸಿರಾಗಿವೆ, ತೊಗಟೆ ರಹಿತವಾಗಿವೆ ಎಂಬುದನ್ನು ಗಮನಿಸಿದ್ದೀರಿ ತಾನೇ?

ವಾಸ್ತವ ಏನೆಂದರೆ ಕಳ್ಳಿಗಿಡಗಳು ಮೂಲತಃ ಬಿಸಿ ಮರುಭೂಮಿ ಪ್ರದೇಶಗಳಿಗೆಂದೇ ಸೃಷ್ಟಿಗೊಂಡಿರುವ ಸಸ್ಯಗಳು. ಅಂಥ ನೆಲೆಗಳಲ್ಲಿ ವಿಪರೀತ ಬಿಸಿಲು, ಅತ್ಯಪರೂಪದ ಮಳೆ. ಹಾಗಿದ್ದರೂ ಕುದಿ ಕುದಿವ ಬಿಸಿಲಲ್ಲೂ, ತೀವ್ರ ದೀರ್ಘ ಜಲಾಭಾವದಲ್ಲೂ ಕಳ್ಳಿಗಿಡಗಳು ನೆಮ್ಮದಿಯಿಂದ ಬಾಳುತ್ತವೆ, ಬೆಳೆಯುತ್ತವೆ; ಹೂವರಳಿಸಿ ಹಣ್ಣು ಬಿಡುತ್ತವೆ; ಶತಮಾನ ಕಾಲ ಬದುಕುತ್ತವೆ.

ಅದೆಲ್ಲ ಸಾಧ್ಯವಾಗಿರಲು ಎರಡು ಕಾರಣಗಳಿವೆ: "ಬಹಳ ಅಪರೂಪವಾಗಿ–ಒಂದು ವರ್ಷಕ್ಕೋ ಹಲವು ವರ್ಷಗಳಿಗೋ ಒಮ್ಮೆ– ಲಭಿಸುವ ಮಳೆ ನೀರನ್ನೇ ತುಂಬ ಕ್ಷಿಪ್ರವಾಗಿ ಹೀರಿ ಭಾರೀ ಪ್ರಮಾಣದಲ್ಲಿ ಶೇಖರಿಸಿಟ್ಟುಕೊಳ್ಳುವ ಶಕ್ತಿ ಮತ್ತು ಹಾಗೆ ಸಂಗ್ರಹಿಸಿದ ನೀರನ್ನು ಕಿಂಚಿತ್ತೂ ವ್ಯರ್ಥಮಾಡದೆ ಭಾಷ್ಪ ವಿಸರ್ಜನೆಯನ್ನೂ ಅತಿ ಕನಿಷ್ಟಗೊಳಿಸಬಲ್ಲ ಸಾಮರ್ಥ್ಯ."

ಈ ಎರಡೂ ಸಾಮರ್ಥ್ಯಗಳು ಮೈಗೂಡಲು ಒಪ್ಪವಾಗುವಂತೆ ಕಳ್ಳಿಗಿಡಗಳನ್ನು ನಿಸರ್ಗ ಮಾರ್ಪಡಿಸಿದೆ. ಕಳ್ಳಿಗಿಡದ ಕಾಂಡ–ಕೊಂಬೆಗಳಲ್ಲೆಲ್ಲ



ನೀರನ್ನು ತುಂಬಿಟ್ಟುಕೊಳ್ಳಬಲ್ಲ ವಿಶೇಷ ಜೀವಕೋಶಗಳು ಕಿಕ್ಕಿರಿದಿವೆ. ಅದಕ್ಕೇ ಸೆಗ್ವಾರೋ, ಕಾರ್ಡನ್ ಇತ್ಯಾದಿ ಕಳ್ಳಿಗಿಡಗಳು (ಚಿತ್ರ ನೋಡಿ) ಒಮ್ಮೆಗೇ ಒಂದು ಸಾವಿರ ಲೀಟರ್‌ಗಳಷ್ಟು ನೀರನ್ನು ಹೀರಬಲ್ಲವು. ಹಾಗೆಯೇ ಭಾಷ್ಪ ವಿಸರ್ಜನೆಯನ್ನೂ ಅತಿ ಕಡಿಮೆ ಮಾಡಲೆಂದು ಕಳ್ಳಿಗಿಡದ ಕಾಂಡ ಕೊಂಬೆಗಳೇ ಹರಿತ್ವನ್ನು ಪಡೆದು ತಾವೇ ಎಲೆಗಳ ಕೆಲಸವಾದ ದ್ಯುತಿ ಸಂಶ್ಲೇಷಣೆ ನಡೆಸುತ್ತವೆ. ಕೊಳವೆ ಆಕಾರದ ಕಾಂಡ–ಕೊಂಬೆಗಳ ಮೂಲಕ ಆವಿಯಾಗುವ ನೀರಿನ ಪ್ರಮಾಣ ಸಾವಿರಾರು ಎಲೆಗಳ ಮೂಲಕ ಕಳೆದುಹೋಗುವ ನೀರಿಗಿಂತ ಅತ್ಯಲ್ಪ ತಾನೇ? ಆದ್ದರಿಂದಲೇ ಕಳ್ಳಿಗಿಡಕ್ಕೆ ಎಲೆಗಳಿಲ್ಲ. ಎಲೆಗಳಿಲ್ಲದ್ದರಿಂದ ಒರಟೊರಟಾದ, ಮುಳ್ಳು ತುಂಬಿದ ಬರೀ ಕಾಂಡ ಇರುವುದರಿಂದ ಕಳ್ಳಿಗಿಡಕ್ಕೆ 'ಮೇಯುವ ಪ್ರಾಣಿ'ಗಳ ಭಯವೂ ಇಲ್ಲ.

ಹಾಗೆಲ್ಲ ಆದ್ದರಿಂದಲೇ ಕುದಿವ ಮರುಭೂಮಿಯಲ್ಲಿ ಕಿತ್ತೆಸೆದ ಕಳ್ಳಿಗಿಡಗಳು ಕೆಲವಾರು ವರ್ಷಗಳ ಕಾಲ ಬಾಡದೆ ಸಾಯದೆ ಉಳಿದಿರಬಲ್ಲವು. ಎಲೆಗಳಿಲ್ಲದ್ದರ ಫಲಿತ ಅದು.

■ ಎನ್. ವಾಸುದೇವ್